# ರೈತನ ಮಗನು





ಸಚಿನ ಚವ್ಹಾಣ

Scanned with OKEN Scanner

# ರೈತನ ಮಗನು



(ಕವನ ಸಂಕಲನ)

ಸಚಿನ್ ಚವ್ಹಾಣ್

: ಪ್ರಕಾಶನ :

ಚವ್ಹಾಣ್ ಪ್ರಕಾಶನ, ಲಿಂಗದಳ್ಳಿ

2023

Scanned with OKEN Scanner

# ಚೊಚ್ಚಲ "ರೈತನ ಮಗನು"

# ಕವನ ಸಂಕಲನ ಯುವ ವಿದ್ಯಾರ್ಥಿಗಳಿಗೆ ಪ್ರೇರಣೆ



ಯುವ ಸಾಹಿತಿ

**ಸಚಿನ ಚವ್ಹಾಣ್**

ಹಳ್ಳಿಯಿಂದ ಬಂದ ಯುವ ಗ್ರಾಮೀಣ ಪ್ರತಿಭೆ ಸಾಹಿತ್ಯಕವಾಗಿ ಬೆಳೆದು ಯುವ ಪ್ರತಿಭೆಗೆ ಸ್ಫೂರ್ತಿಯಾಗಿರುವ ವಿದ್ಯಾರ್ಥಿ ಎಂದರೆ ಅದು ಸಚಿನ ಚವ್ಹಾಣ್.

ಹೌದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಯಾಗಿರುವ ಈತ ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿ ವಹಿಸಿ ಈ ವಿಷಯ ತೆಗೆದುಕೊಂಡು ಸತತ ಅಧ್ಯಯನಶೀಲನಾಗಿ ದಿನ ನಿತ್ಯ ಕವನಗಳ ಬರೆಯುವ ಪ್ರವೃತ್ತಿಯಾಗಿಸಿಕೊಂಡು,ಚೊಚ್ಚಲ ಕವನ ಸಂಕಲನ 'ರೈತನ ಮಗನು' ಎಂಬ ಶಿರ್ಷಿಕೆಯಡಿ ಚುಟುಕು ಕವನ ಸಂಕಲನ ಮೊದಲ ಪ್ರಯತ್ನದಲ್ಲಿ ಕವನಗಳು ಸಂಗ್ರಹಿಸಿ ವಿದ್ಯಾರ್ಥಿ ದೆಸೆಯಲ್ಲೇ ಪ್ರಯತ್ನ ಈ ಪ್ರಯತ್ನ ಮಾಡಿದ್ದಾನೆ ನಿಜಕೂ ಶ್ಲಾಘನೀಯವಾದದ್ದು.

ಈ ಚೊಚ್ಚಲ ಕೃತಿಯು ಯುವ ಪ್ರತಿಭೆಗಳಿಗೆ ಪ್ರೇರಣೆಯಾಗುವುದಲ್ಲದೆ ಯುವ ಬರಹಗಾರರಿಗೆ ಸಾಹಿತ್ಯಕವಾಗಿ ಅಭಿರುಚಿಯನ್ನು ಇಮ್ಮಡಿಗೊಳಿಸಿದ್ದಾನೆ, ಈತನ ಅಭಿರುಚಿಯನ್ನು ಗುರುತಿಸಿ ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ಡಾ.ಶ್ರೀನಿವಾಸ ದೊಡ್ಡಮನಿ ಗುರುಗಳು ಸೂಕ್ತ ಸಲಹೆಯ ಮೇರೆಗೆ ಪ್ರಯತ್ನ ಯಶಸ್ವಿಯಾಗಲು ಸಾಧ್ಯವಾಯಿತು. ಮಹಾವಿದ್ಯಾಲಯದ ಯುವ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಹಾಗೂ ಎಲ್ಲ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದ್ದಾನೆಂದು ಹೇಳಲು ಸಂತೋಷವನಿಸುತ್ತದೆ.

ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಯಾಗಿರುವ ಈತ ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿಯಿಂದ ಹೆಸರಾಂತ ಪತ್ರಿಕೆಗಳಲ್ಲಿ ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಪ್ರಕಟಗೊಂಡಿವೆ, ಈತನ ಈ ಲೇಖನಗಳ ಪ್ರಕಟಣೆಯೇ ಈ ಕವನ ಸಂಕಲಕ್ಕೆ ಪ್ರೇರಣೆಯಾಗಿದೆ. ಸತತ ಪರಿಶ್ರಮ ಓದುವ ಹಾಗೂ ಬರೆಯುವ ಹವ್ಯಾಸವನ್ನು ಮೈಗೂಡಿಸಿಕೊಂಡು ಸಚಿನ್ ಚವ್ಹಾಣ್ ಕಲಿಕಾ ಹಂತದಲ್ಲಿ ಇಂತಹ ಒಂದು ಸಣ್ಣ ಪ್ರಯತ್ನ ಮಾಡಿದ್ದಾನೆ ಕಳೆದ ವರ್ಷ ಇದೇ ರೀತಿ ಯುವ ಬರಹಗಾರ ಪತ್ರಿಕೋದ್ಯಮ ವಿದ್ಯಾರ್ಥಿ ಅಂಬರೀಷ್ ನಾಯ್ಕೊಡಿ ನನ್ನ ವಿದ್ಯಾರ್ಥಿಯಿಂದ ಪ್ರೇರಣೆ ಪಡೆದ ಈತ ತಾನು ಸಹ ಇಂತಹ ಪ್ರಯತ್ನಕ್ಕೆ ಕೈ ಹಾಕಿದ್ದಾನೆ ನಿಜಕ್ಕೂ ನನಗೆ ಸಂತೋಷವೆನಿಸುತ್ತದೆ.

'ರೈತನ ಮಗನು' ಎಂಬ ಶೀರ್ಷಿಕೆಯಡಿಯಲ್ಲಿ ಹೊರಹೊಮ್ಮುತ್ತಿರುವ ಕವನ ಸಂಕಲನದಲ್ಲಿ ಒಟ್ಟು 41 ಕವಿತೆಗಳಿದ್ದು ಅದರಲ್ಲಿ ಬರುವ ಎಲ್ಲಾ ಕವಿತೆಗಳು ವ್ಯಯಕ್ತಿಕ ಬದುಕಿಗೆ ಹತ್ತಿರವಾಗುವಂತಿವೆ. ಇಲ್ಲಿ ಬರುವ ಕವಿತೆಗಳು ಓಗಿವೆ, ಭೂತಾಯಿ, ದೇಶಪ್ರೇಮ, ಸಿದ್ದೇಶ್ವರ ಶ್ರೀಗಳು, ಸಂಸ್ಕೃತಿ, ಸೇರಿದಂತೆ ವೈಚಾರಿಕತೆಯುಳ್ಳ ಹಲವು ಕವಿತೆಗಳಾಗಿದ್ದು ಈತನ ಕವಿತೆಯಲ್ಲಿ ಅತ್ಯದ್ಭುತವಾದ ವ್ಯಾಕರಣ ರಚನೆ, ಪ್ರಾಸ ಪದಗಳ ಜೋಡನೆ, ಅತ್ಯುತ್ತಮ ಕವಿತೆ ರಚನೆ ಮೊದಲ ಪ್ರಯತ್ನದಲ್ಲಿ ನಿಜಕ್ಕೂ ಅದ್ಭುತವಾದ ಪ್ರಯತ್ನ ಮಾಡಿದ್ದಾನೆ. ಇಂದಿನ ಆಧುನಿಕ ಯುಗದಲ್ಲಿನ ಯುವಕರಿಗೆ ಪ್ರೇರಣೆಯಾಗುವಂತಿದೆ.ಇಂದಿನ ಯುವಕರು ಸದಾ ಮೊಬೈಲ್ ನಲ್ಲಿ ನಿರತನಾಗಿ ಅಧ್ಯಯನದಿಂದ ವಂಚಿರಾಗುತ್ತಿದ್ದಾರೆಂಬ ಕಳವಳ. ಅಂತಹದರಲ್ಲಿ ಯುವಕರಿಗೆ ಈತನು ಪ್ರೇರಣೆಯಾಗಲಿ ಎಂಬ ನನ್ನ ಆಶಯ.

ಎಲ್ಲ ವಿದ್ಯಾರ್ಥಿಗಳಲ್ಲಿ ಒಂದು ಪ್ರತಿಭೆ ಹುದುಗಿರುತ್ತದೆ ಅದರಂತೆ ಅದನ್ನು ಹೊರ ಜಗತ್ತಿಗೆ ಪರಿಚಯಿಸುವ ಪ್ರಯತ್ನ ಮಾಡಬೇಕು ಎಲ್ಲ ಯುವ ಪ್ರತಿಭೆಗಳು ಸತತ ಅಧ್ಯಯನ ಶೀಲರಾಗಿ ಬದುಕಿನಲ್ಲಿ ಉತ್ತಮ ಸ್ನೇಹಿತನೆಂದು ಬಿಂಬಿಸಿಕೊಳ್ಳುವ ಪುಸ್ತಕದ ಪ್ರೇಮಿಯಾಗಿ, ಸ್ನೇಹಿತನಾಗಿ ನಿರಂತರ ಅಧ್ಯಯನಶೀಲರಾಗಬೇಕಾಗಿದೆ. ಓದು ಕೇವಲ ಪಠ್ಯಕ್ಕೆ ಸೀಮಿತವಾಗದೇ ಜ್ಞಾನವೆಂಬ ದಾಹ ತೀರದಂತೆ ಸದಾ ಅಧ್ಯಯನಶೀಲರಾಗಿ ಉತ್ತಮ ಜ್ಞಾನವೃದ್ಧಿಸುವಲ್ಲಿ ಇಂದಿನ ವಿದ್ಯಾರ್ಥಿಗಳು ಒಂದು ಹೆಜ್ಜೆ ಮುಂದಿಡಬೇಕಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪಠ್ಯಪುಸ್ತಕದ ಹೊರತಾಗಿಯೂ ಉತ್ತಮ ಕಾದಂಬರಿ, ಕಥೆ, ಕವನ, ನಾಟಕಗಳು ಓಗೆ ಹಲವಾರು ಸಾಹಿತ್ಯಿಕವಾಗಿ ನಮಗೆ ಜ್ಞಾನವನ್ನು ವೃದ್ಧಿಸುವಂಥಹ ಉತ್ತಮ ಪುಸ್ತಕಗಳನ್ನು ಸ್ನೇಹಿತರನ್ನಾಗಿಸಿಕೊಳ್ಳಬೇಕಾಗಿದೆ.

ಸಚಿನ್ ಚವ್ಹಾಣ್ ಇಂತಹ ವಿದ್ಯಾರ್ಥಿಗಳನ್ನು ಪಡೆದ ನಾನು ನಿಜಕೂ ನಾನು ಧನ್ಯನೆಂದು ಹೇಳಲು ಸಂತೋಷವೆನಿಸುತ್ತದೆ. ಮುಂದೆಯೂ ಇಂತಹ ಕವನ, ಕಥೆ, ಕಾದಂಬರಿ ಇನ್ನಷ್ಟು ಪುಸ್ತಕಗಳು ಬಿಡುಗಡೆಗೊಳಿಸಿ ಸಾಹಿತ್ಯ ಕ್ಷೇತ್ರದಲ್ಲಿ ಇನ್ನು ಬೆಳೆಯಲಿ ಎಂಬ ನನ್ನ ಆಶಯ.

**ಮಲಿಕ್.ಎಲ್. ಜಮಾದಾರ**
ಮುಖ್ಯಸ್ಥರು, ಉಪನ್ಯಾಸಕರು
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
ಬಿ.ಎಲ್.ಡಿ.ಇ. ಸಂಸ್ಥೆಯ ಎಸ್.ಬಿ ಕಲಾ ಮತ್ತು
ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ ವಿಜಯಪುರ

**ರೈತನ ಮಗನು**
ಕವನ ಸಂಕಲನ
ಚವ್ಹಾಣ ಪ್ರಕಾಶನ, ಲಿಂಗದಳ್ಳಿ

Scanned with OKEN Scanner